ಇ) ಉಡುಪಿ ಜಿಲ್ಲೆಯಲ್ಲಿ ಮುಖ್ಯವಾಗಿ ಭತ್ತ , ಕಬ್ಬು ಮತ್ತು ದ್ವಿದಳ ಧಾನ್ಯಗಳು (ಉದ್ದು, ಹೆಸರು, ಅಲಸಂದೆ) ಹಾಗೂ ಎಣ್ಣೆ ಕಾಳು (ಎಳ್ಳು ಹಾಗು ಶೇಂಗ) ಬೆಳೆಗಳನ್ನು ಬೆಳೆಯುತ್ತಾರೆ. ತಾಲೂಕುವಾರು, ಎಕರೆವಾರು, ಬೆಳೆ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಬೀದರ್‌ನ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ ವ್ಯವಹಾರದ ಬಗ್ಗೆ

4220 (4859) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ನರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಸಲುವಾಗಿ ರೈತರಿಂದ ಪಡೆದ ಷೇರು ಹಣ ಎಷ್ಟು;

ಆ) ಪ್ರತಿ ರೈತರಿಂದ 5000 ರೂ V.S.S.S.N ನಲ್ಲಿ ಸಾಲ ಮಂಜೂರಿ ಮಾಡಿಸಿ ಆ ಹಣವನ್ನು ಕಾರ್ಖಾನೆಗೆ ಷೇರು ಹಣವೆಂದು ಜಮಾ ಮಾಡಿಕೊಂಡು 4200 ರೂ. Share certifivate ಕೊಟ್ಟು ಉಳಿದ 800 ರೂ. ಹಣ ಪ್ರತಿ ರೈತರಿಗೆ ಕೊಡದೇ ದುರುಪಯೋಗ ಪಡಿಸಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಳ್ಳಬೇಕೆಂದಿರುವ ಕ್ರಮವೇನು; ವಿವರ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಒಟ್ಟು ರಊ. 895. 21 ಲಕ್ಷ ಶೇರು ಹಣವನ್ನು ಸಂಗ್ರಹಿಸಲಾಗಿದೆ.

ಆ) ಇಲ್ಲ

ಔರಾದ್ ತಾಲ್ಲೂಕಿನ ಅಂಗನವಾಡಿಗಳಿಗೆ ಕಳಪೆ ಮಟ್ಟದ ಆಹಾರ ಧಾನ್ಯ ಪೂರೈಕೆಯ ಬಗ್ಗೆ

4221(4860) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ C.D.P.O. ಆಫೀಸ್ ಸಂತಪೂರದಿಂದ ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳು ಕಳಪೆ ಮಟ್ಟದಾಗಿರುವುದು ಮಾನವ ಉಪಯೋಗಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂಥ ಅವ್ಯವಹಾರದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಜಿಲ್ಲಾ ಪಂಚಾಯತ್ ಬೀದರ್ ಇವರು ದಾಳಿ ಮಾಡಿರುವ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಅದರ ಸತ್ಯಂಶದ ವಿವರ ಒದಗಿಸುವುದು;

ಇ) ಔರಾದ್ ತಾಲ್ಲೂಕಿನಲ್ಲಿ ಕಳಪೆ ಮಟ್ಟದ ಆಹಾರಧಾನ್ಯ ಸರಬರಾಜು ಮಾಡುವ ಏಜೆನ್ಸಿ ಯಾವುದು; ಇಂಥವರ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ; ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳು ಕಳಪೆ ಮಟ್ಟವಾಗಿರುವುದಿಲ್ಲ.

ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರ್ ಇವರು ದಿನಾಂಕ : 9–7–03 ರಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೀದರ್‌ಗೆ ಆಕಸ್ಮಿಕ